ದಿನಾಂಕ 18-07-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀಮತಿ ಎನ್.ಬಿ.ಜಿ., ವಕೀಲರಿಂದ:-

ನಾನು ಪದವಿಯನ್ನು ಪೂರ್ಣಗೊಳಿಸಿಲ್ಲ. ಪ್ರತಿವಾದಿ 3 ಮತ್ತು 4ರವರು ಪದವಿ ಮಾಡಿರುತ್ತಾರೆ. ಅವರಿಬ್ಬರಿಗೂ ಮದುವೆಯಾಗಿದೆ. ಅವರು ಬೆಂಗಳೂರಿನಲ್ಲಿ ವಾಸ. ನನ್ನ ತಾಯಿ 7ನೇ ತರಗತಿಯವರೆಗೆ ಕಲಿತಿದ್ದಾರೆ. ನನಗೆ ಇಂಗ್ಲೀಷ್ ಓದಲು ಬರುವುದಿಲ್ಲ. ಈ ದಾವೆಯ ವಾದಪತ್ರ, ಪ್ರತಿವಾದ ಪತ್ರ ಹಾಗೂ ದಾಖಲೆಗಳನ್ನು ನೋಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ ವಿಷಯಗಳನ್ನು ನಾನೇ ಹೇಳಿ ತಯಾರು ಮಾಡಿಸಿದ್ದು. ದಾವಾ ಸ್ವತ್ತುಗಳನ್ನು ಬಿಟ್ಟು ನಮ್ಮ ಬಳಿ ಬೇರೆ ಜಮೀನು ಇದೆ. ನಿಪಿ-2ರಲ್ಲಿ ನನ್ನ ಸಹಿ ಇದೆ. ನಿಪಿ-2ರಲ್ಲಿ ಉಳಿದ ಪ್ರತಿವಾದಿಗಳ ಸಹಿಗಳು ಸಹ ಇವೆ. ನಿಪಿ-3ರಲ್ಲಿ ನನ್ನ ತಂದೆ ತಿಮ್ಮಯ್ಯರವರ ಸಹಿ ಇದೆ.

2. ನನ್ನ ತಂದೆ 2018ರಲ್ಲಿ ತೀರಿಕೊಂಡರು ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ಡಿಸೆಂಬರ್-2018ರಲ್ಲಿ ದಾವಾ ಸ್ವತ್ತುಗಳು ನನ್ನ ಹೆಸರಿಗೆ ಮ್ಯುಟೇಶನ್ ಆಗಿದೆ ಎಂದರೆ ಸರಿ. ನನ್ನ ತಂದೆಯ ಮರಣಾ ನಂತರ ನನ್ನ ಹೆಸರಿಗೆ ಮ್ಯುಟೇಶನ್ ಆಗದೇ ಕ್ರಯಪತ್ರ ನೋಂದಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿ. ವಾದಪತ್ರದಲ್ಲಿ ನನ್ನ ವಿಳಾಸ ಬರೆದಿರುವುದು ಸರಿ ಇದೆ. ವಾದಪತ್ರದಲ್ಲಿರುವ ನನ್ನ ವಿಳಾಸ ಹಾಗೂ ನಿಪಿ-5ರಲ್ಲಿರುವ ವಿಳಾಸ ಒಂದೇ ಎಂದರೆ ಸರಿ. ನಿಪಿ-3ರಲ್ಲಿ ನನ್ನ ಸಹಿಯನ್ನು ಫೋರ್ಜರಿ ಮಾಡಿದ್ದಾರೆ ಎಂದು ನಾನು ಯಾವುದೇ ಕ್ರಮ ಕೈಗೊಂಡಿಲ್ಲ. ನಾನು ಕ್ರಯಪತ್ರ ಬರೆದುಕೊಡಲು ರೆಡಿ ಇದ್ದೇವೆ ಎಂದು ವಾದಿಗೆ ನಾವು ಯಾವುದೇ ನೋಟಿಸ್ ಕೊಟ್ಟಿಲ್ಲ. ಕ್ರಯಪತ್ರ ಬರೆಸಿಕೊಳ್ಳಲು ನಾನು ತಯಾರಿದ್ದೇನೆ ಎಂದು ವಾದಿ ನೋಟಿಸ್ ಕಳುಹಿಸಿದ್ದು, ಅದು ನಮಗೆ ತಲುಪಿದೆ ಎಂದರೆ ಸರಿಯಲ್ಲ.

3. ವಾದಿ ನಮಗೆ ಒಟ್ಟು 33 ಲಕ್ಷ ಹಣ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯಿಂದ 33 ಲಕ್ಷ ಹಣ ಬಂದಿಲ್ಲ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ವಾದಿ ಕೊಟ್ಟಿರುವುದು 23 ಲಕ್ಷ ಹಣ ಮಾತ್ರ ಎಂದು ನುಡಿಯುತ್ತಾರೆ. ನಿಮ್ಮ ತಂದೆಯ ಮರಣಾ ನಂತರ ವಾದಿಯ ಹೆಸರಿಗೆ ಕ್ರಯಪತ್ರ ಬರೆಸಿಕೊಡಲು ನೀವು ರೆಡಿ ಇದ್ದೀರಾ ಎಂದರೆ ಸಾಕ್ಷಿಯು ನಾವು ಹೇಳಿದರೂ ಸಹ ವಾದಿ ಬರಲಿಲ್ಲ ಎಂದು ನುಡಿಯುತ್ತಾರೆ. ವಾದಿ ನಾನು ಕ್ರಯಪತ್ರ ಬರೆಸಿಕೊಳ್ಳಲು ರೆಡಿ ಇದ್ದೇನೆ ಎಂದು ದೂರವಾಣಿ ಮುಖಾಂತರ ತಿಳಿಸಿದ್ದರೂ ನಾವು ಬರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾ ನಂತರ ಮ್ಯುಟೇಶನ್ ಆದ ಮೇಲೆ ಕ್ರಯಪತ್ರ ಬರೆದುಕೊಡಿ ಎಂದು ವಾದಿ ಕೇಳಿದ್ದರೂ ಸಹ ನಾವು ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾ ನಂತರ ವಾದಿ ಹಲವು ಬಾರಿ ಕ್ರಯಪತ್ರ ಬರೆದುಕೊಡಿ ಎಂದು ಹೇಳಿದ್ದರೂ ಸಹ ನಾವು ಬರಲಿಲ್ಲ ಎಂದರೆ ಸರಿಯಲ್ಲ. ವಾದಿ ಕ್ರಯಪತ್ರ ಬರೆದುಕೊಡಿ ಎಂದು ಕೇಳಿದಾಗ ಮ್ಯುಟೇಶನ್ ಆಗುವವರೆಗೂ ಕಾಯಿರಿ ಎಂದು ನಾವು ಹೇಳಿದೆವು ಎಂದರೆ ಸರಿಯಲ್ಲ.

4. ನಿಮ್ಮ ತಂದೆಯ ಮರಣಾ ನಂತರ ವಾದಿಯ ಜೊತೆ ಮಾತನಾಡಿಸಲು ನಿಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಅವರು ನಮಗೆ ಯಾವುದೇ ಫೋನ್ ಮಾಡಿಲ್ಲ ಎಂದು ನುಡಿಯುತ್ತಾರೆ. ಉಳಿದ ಪ್ರತಿವಾದಿಗಳ ಪರವಾಗಿ ಸಾಕ್ಷ್ಯ ಕೊಡಬೇಕೆಂದು ಇತರೆ ಪ್ರತಿವಾದಿಗಳು ಲಿಖಿತ ರೂಪದಲ್ಲಿ ಕೊಟ್ಟಿಲ್ಲ. ಸಾಕ್ಷಿಯು ಸ್ವಇಚ್ಛೆಯಿಂದ ನನ್ನ ಹೆಸರಿಗೆ ಹಕ್ಕು ನಿವೃತ್ತಿ ಪತ್ರ ಮಾಡಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ವಾದಿ ಕ್ರಯಪತ್ರ ಬರೆಸಿಕೊಳ್ಳಲು ಬಾಕಿ ಹಣ ಅವರ ಬಳಿಯಿದ್ದರೂ ಸಹ ನೀವು ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರೇ ಬರಲಿಲ್ಲ ಎಂದು ನುಡಿಯುತ್ತಾರೆ. ವಾದಿ ಕೊಟ್ಟಿರುವ ಮುಂಗಡ ಹಣವನ್ನು ಪಾವತಿಸುತ್ತೇವೆ ಎಂದು ನಾವು ಯಾವತ್ತೂ ವಾದಿಗೆ ನೋಟಿಸ್ ಕೊಟ್ಟಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಹಣವನ್ನು ನನ್ನ ತಂದೆ ಮಾತ್ರ ಪಡೆದುಕೊಂಡಿದ್ದಾರೆ, ನಾವು ಯಾರೂ ಪಡೆದುಕೊಂಡಿಲ್ಲ ಎಂದರೆ ಸರಿ.

ಮರು ವಿಚಾರಣೆ : ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.